ಆ) ೧೯೯೦-೯೧ ರಲ್ಲಿ ಮೇಲಿನ ರಸ್ತೆಗಳ ವಾರ್ಷಿಕ ದುರಸ್ತಿ ಕಾಮಗಾರಿಗಳಿಗಾಗಿ ಮುಖ್ಯ ಇಂಜಿನಿಯರ್‌ರವರು ಶ್ರೇಫ್ರುವಾರಿ ಹಣ ಬಿಡುಗಡೆ ಮಾಡುವರು ಬಿಂಡಗನವಿಲೆ ಕಡುಬಳಿ ರಸ್ತೆಯನ್ನು ದುರಸ್ತಿಯಲ್ಲಿಡಲು ಶ್ರೇಫ್ರು ಕ್ರಮ ತೆಗೆದುಕೊಳ್ಳಲಾಗುವುದು.

ಉಡುಪಿ ತಾಲ್ಲೂಕಿನ ಕೋಡಿಕಲ್ಯಾಣವನ್ನು ಪ್ರವಾಸಿ ಧಾಮವಾಗಿ ಅಭಿವೃದ್ಧಿಪಡಿಸುವ ಕುರಿತು

೯೫೦ (೧೫೬೫) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸರಕಾರ ೧೯೯೦-೯೧ನೇ ಸಾಲಿನಲ್ಲಿ ಎಷ್ಟು ಪ್ರವಾಸಿ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಿರುತ್ತದೆ ?

ಆ) ಉಡುಪಿ ತಾಲ್ಲೂಕಿನ ಕೋಡಿಕಲ್ಯಾಣವನ್ನು ಪ್ರವಾಸಿ ಧಾಮವಾಗಿ ಅಭಿವೃದ್ಧಿಪಡಿಸಲು ಯೋಜನೆ ಮಾಡಿದೆಯೇ, ಹಾಗಿದ್ದಲ್ಲಿ ಯಾವಾಗ ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ(ಕಾನೂನು ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರು).—

ಅ)-೧೯೯೦-೯೧ನೇ ಸಾಲಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಪ್ರವಾಸಿ ಕೇಂದ್ರವನ್ನು ಸ್ಥಾಪಿಸಲು ಪರಿಶೀಲಿಸಲಾಗುತ್ತಿದೆ.

೧) ಬೆಳಗಾವಿ ೨) ಗುಲ್ಬರ್ಗಾ ೩) ಚಿಕ್ಕಮಗಳೂರು ೪) ಬೀದರ್
೫) ಜೋಗ್‌ಫಾಲ್ಸ್ ೬) ಕಾರವಾರ

ಆ) ಇಲ್ಲ.

ಸುಳ್ಯ ಕ್ಷೇತ್ರದಲ್ಲಿ ಲೋಕೋಪಯೋಗಿ ಕಾಮಗಾರಿಗಳು

೯೫೧ (೧೫೬೧) ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಕ್ಷೇತ್ರದಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬರುವ ಮೊದಲು ಮಂಜೂರಾದ ಲೋಕೋಪಯೋಗಿ ಕಾಮಗಾರಿಗಳು ಯಾವುವು ?

ಆ) ಈ ಕಾಮಗಾರಿಗಳನ್ನು ಸರ್ಕಾರವೇ ಕೈಗೆತ್ತಿಕೊಂಡು ಪೂರ್ಣಗೊಳಿಸುವುದೇ ಅಥವಾ ಜಿಲ್ಲಾ ಪರಿಷತ್ತಿನವರು ಪೂರ್ಣಗೊಳಿಸುವರೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ, (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು):—

ಅ) ಸುಳ್ಯ ಕ್ಷೇತ್ರದಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬರುವ ಮೊದಲು ದಿನಾಂಕ ೧-೪-೧೯೮೭ ರಲ್ಲಿದ್ದಂತೆ ೩೦ ಕಾಮಗಾರಿಗಳು ಮಂಜೂರಾಗಿದ್ದವು. ವಿವರಗಳನ್ನು ಲಗತ್ತಿಸಿದೆ. (ಅನುಬಂಧ-೧)

ಆ) ಈ ೩೦ ಕಾಮಗಾರಿಗಳಲ್ಲಿ ೨೧ ಕಾಮಗಾರಿಗಳು ಈಗ ಮುಗಿದಿದ್ದು, ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ಮಿಕ್ಕ ೯ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಗಳನ್ನು ಜಿಲ್ಲಾ ಪರಿಷತ್ತಿನವರೇ ಪೂರ್ಣಗೊಳಿಸಬೇಕಾಗಿದೆ.

ಅನುಬಂಧ-೧

ಕ್ರಮ ಸಂಖ್ಯೆ	ಸೂಳ್ಯ ತಾಲ್ಲೂಕಿನಲ್ಲಿ ಕಾಮಗಾರಿಗಳ ಶೀರ್ಷಿಕೆ	ಸಂಖ್ಯೆ :	ಅಂದಾಜು (ರೂ.ಲಕ್ಷ ಗಳಲ್ಲಿ)	ಷರಾ ಕಾಮಗಾರಿಗಳ ಪ್ರಸಕ್ತ ಪರಿಸ್ಥಿತಿ
೧	೨	೩	೪	೫
೧	ಪ್ರೌಢ ಶಿಕ್ಷಣ ಕಟ್ಟಡಗಳು (ಗಾಂಧಿನಗರ)	೧	೩.೭೫	ಪೂರ್ಣಗೊಂಡಿದೆ.
೨	ವೈದ್ಯಕೀಯ-ಕಟ್ಟಡಗಳು (ಸೂಳ್ಯ ಮತ್ತು ಕೂಟ್ಟಮಾಗಾರುನಲ್ಲಿ ಪಿಎಚ್‌ಸಿ)	೨	೧೮.೫೪	-,,-
೩	ರಸ್ತೆಯ ಡಾಂಬರೀಕರಣ	೨	೧೪.೦೪	ಪ್ರಗತಿಯಲ್ಲಿದೆ.
೪	ರಸ್ತೆಯ ನಿರ್ಮಾಣ	೭	೧೭.೪೦	೪ ಕೆಲಸ ಪೂರ್ಣಗೊಂಡಿದೆ ೩ ಪ್ರಗತಿಯಲ್ಲಿದೆ.
೫	ಕನಿಷ್ಠ ಅವಶ್ಯಕತೆಗಳ ಕಾರ್ಯಕ್ರಮ	೬	೬೭.೧೫	೫ ಪೂರ್ಣಗೊಂಡಿದೆ. ೧ ಪ್ರಗತಿಯಲ್ಲಿದೆ.
೬	ಹರಿಜನವಾಡ ಕಾಮಗಾರಿ (ದೊಡ್ಡೇರಿ ಹರಿಜನ ಕಾಲೋನಿಗೆ ಕೂಡು ರಸ್ತೆ)	೧	೫.೦೦	ಪ್ರಗತಿಯಲ್ಲಿದೆ.
೭	ಗುಡ್ಡಗಾಡು ಉಪಯೋಜನೆ (ನಲಿಯಾರು ಕಾಲೋನಿಗೆ ಕೂಡು ರಸ್ತೆ)	೧	೫.೩೦	ಪೂರ್ಣಗೊಂಡಿದೆ.
೮	ಸೇತುವೆ ಕಾಮಗಾರಿಗಳು	೯	೩೯.೪೦	೭ ಪೂರ್ಣಗೊಂಡಿದೆ ೨ ಪ್ರಗತಿಯಲ್ಲಿವೆ
೯	ಮೈಸೂರು-ಬಂಟ್ವಾಳ ರಸ್ತೆಯ ೧೬೮.೪ ಕಿ.ಮೀ.ನಲ್ಲಿ ಮೋರಿ ಸೇತುವೆ ನಿರ್ಮಾಣ	೧	೩.೦೦	ಪೂರ್ಣಗೊಂಡಿದೆ.

ನರೀಪುರದ ಸೇತುವೆಯನ್ನು ದುರಸ್ತಿಗೊಳಿಸುವುದು

೯೫೨ (೧೬೨೧) ಶ್ರೀ ಎಂ. ಸಿದ್ದವಾದಯ್ಯ, (ಕೊಳ್ಳೇಗಾಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೊಳ್ಳೇಗಾಲ ತಾಲ್ಲೂಕು ನರೀಪುರದಲ್ಲಿರುವ ಸೇತುವೆಯು ಶಿಥಿಲವಾಗಿರುವುದು ನಿಜವೆ

ಆ) ಹಾಗಿದ್ದಲ್ಲಿ, ಇದರ ದುರಸ್ತಿಯ ಬಗ್ಗೆ ಸರ್ಕಾರದವರು ತ್ವರಿತ ಕ್ರಮ ಕೈಕೊಳ್ಳುವರೇ? ?

ಶ್ರೀ ಜಿ. ಪುಟ್ಟಸ್ವಾಮಿಗೌಡ, (ಲೋಕೋಪಯೋಗಿ ಮತ್ತು ನೀಲಾವರಿ ಮಂತ್ರಿಗಳು).—

ಅ) ಕೊಳ್ಳೇಗಾಲ ತಾಲ್ಲೂಕು, ಕೊಳ್ಳೇಗಾಲ-ಕೊರಟಗೆರೆ ಪ್ರಾಂತೀಯ ಹೆದ್ದಾರಿಯ ೩.೭೦ನೇ ಕಿ.ಮೀ.ನಲ್ಲಿರುವ (ನರೀಪುರ ಅಡ್ಡ ರಸ್ತೆ ಹತ್ತಿರ) ಸೇತುವೆಯ ಮುಖ್ಯ ಭಾಗ ಚೆನ್ನಾಗಿದ್ದು, ರಸ್ತೆ ಮೇಲ್ಬಾಗದ ಪ್ಯಾರಾಪೆಟ್ ಗೋಡೆಗಳು ಪಾತ್ರ ವಾಹನ ಸಂಚಾರದಿಂದ ಹಾನಿಗೊಳಗಾಗಿರುತ್ತವೆ.

ಆ) ಈಗ ಹಾನಿಯಾಗಿರುವ ಪ್ಯಾರಾಪೆಟ್ ಗೋಡೆಗಳನ್ನು ಪುನರ್ ನಿರ್ಮಿಸಲು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

ಮಂಚನಬೆಲೆ ಯೋಜನೆಯ ಮುಳುಗಡೆ ಪ್ರದೇಶದ ರೈತರಿಗೆ ಪರಿಹಾರ ಮತ್ತು ಪುನರ್‌ವಸತಿ ಸೌಕರ್ಯ

೯೫೫ (೧೬೯೪) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮಂಚನಬೆಲೆ ಯೋಜನೆ ಈಗ ಯಾವ ಹಂತದಲ್ಲಿದೆ ಹಾಗೂ ಅದಕ್ಕೆ ಇದುವರೆಗೂ ಖರ್ಚು ಮಾಡಿರುವ ಹಣವೆಷ್ಟು ?